## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಹರನಾಳ ಗ್ರಾಮ ಪಂಚಾಯತಿ ಸದಸ್ಯರುಗಳು, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರುಗಳ ಮನವಿ, ದಿನಾಂಕ 14.09.2016
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ವಿಜಯಪುರ ಇವರ ಪತ್ರ ಸಂಖ್ಯೆ: ಜಿಪಂಅ/ಗ್ರಾಪಂ/ಸಿಬ್ಬಂದಿ/ಸಿಆರ್-211/2016-17/1412, ದಿನಾಂಕ 16.11.2016
3) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 19.01.2017
4) ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ 07.02.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಹರನಾಳ ಗ್ರಾಮ ಪಂಚಾಯತಿಯ ಸದಸ್ಯರು ಸರ್ಕಾರಕ್ಕೆ ದೂರು ಸಲ್ಲಿಸಿ, ಹರನಾಳ ಗ್ರಾಮ ಪಂಚಾಯತಿಯ ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿಯಾದ ಶ್ರೀ ಎಂ.ಎಲ್.ಬಜಂತ್ರಿ ಹಾಗೂ ಅಧ್ಯಕ್ಷರಾದ ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ ಇವರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ವಿಜಯಪುರ ಜಿಲ್ಲಾ ಪಂಚಾಯತಿ ಇವರು ಈ ಬಗ್ಗೆ ವರದಿ ಸಲ್ಲಿಸಿ, ಹರನಾಳ ಗ್ರಾಮ ಪಂಚಾಯತಿಯಲ್ಲಿ ನಡೆದಿರುವ ಅವ್ಯವಹಾರದ ಕುರಿತು ಕೆಳಗಿನಂತೆ ಸಲ್ಲಿಸಿರುತ್ತಾರೆ.

ಹರನಾಳ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ ಹಾಗೂ ಪ್ರಭಾರ ಪಿಡಿಓ ಆದ ಶ್ರೀ ಎಂ.ಎಲ್. ಬಜಂತ್ರಿ, ಗ್ರೇಡ್-2 ಕಾರ್ಯದರ್ಶಿ ಇವರುಗಳು ಕೂಡಿಕೊಂಡು ಅಭಿವೃದ್ಧಿ ಯೋಜನೆ, 13ನೇ ಹಣಕಾಸು ಹಾಗೂ ನರೇಗಾ ಯೋಜನೆಯಡಿಯಲ್ಲಿ ಅವ್ಯವಹಾರ ಮಾಡಿರುವುದಾಗಿ ಮತ್ತು ಅವರ ಮೇಲೆ ಕೂಡಲೇ ಕ್ರಮ ಕೈಗೊಳ್ಳುವಂತೆ ಸಲ್ಲಿಸಿದ ದೂರಿನನ್ವಯ, ಸದರಿ ದೂರಿನನ್ವಯ ತನಿಖೆ ಕೈಕೊಂಡು ತನಿಖಾ ವರದಿ ಸಲ್ಲಿಸುವಂತೆ ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತಿ, ವಿಜಯಪುರ ಇವರಿಗೆ ನಿರ್ದೇಶನ ನೀಡಲಾಗಿತ್ತು. ಆ ಪ್ರಕಾರ ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತಿ, ವಿಜಯಪುರ ಇವರು ದಿನಾಂಕ 20.10.2016 ರಂದ ಹರನಾಳ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ತನಿಖೆ ಕೈಗೊಂಡು ತಮ್ಮ ತನಿಖಾ ವರದಿಯನ್ನು ಈ ಕೆಳಗಿನಂತೆ ಸಲ್ಲಿಸಿರುತ್ತಾರೆ.

1. 2015-16 ನೇ ಸಾಲಿನ 13ನೇ ಹಣಕಾಸು ಯೋಜನೆಯಡಿ ಶಿಲ್ಕು ಇದ್ದ ರೂ. 6777.00 ಹಾಗೂ ಬಿಡುಗಡೆಯಾದ ಹಣ ರೂ. 2,36,548.00 ಗಳ ಕ್ರಿಯಾ ಯೋಜನೆಯು ಗ್ರಾಮ ಪಂಚಾಯತಿಯಲ್ಲಿರುವುದಿಲ್ಲ
2. 2015-16ನೇ ಸಾಲಿನ 14ನೇ ಹಣಕಾಸು ಯೋಜನೆಯ 1ನೇ ಕಂತಿನ ಹಣ ರೂ. 6,71,806.00 ಗಳ ಕ್ರಿಯಾ ಯೋಜನೆ ತಯಾರಿಸಲಾಗಿದ್ದು, ಆದರೆ ಸದರಿ ಕ್ರಿಯಾ ಯೋಜನೆ ಪ್ರಕಾರ ಹಣ ಖರ್ಚು ಮಾಡಿರುವುದಿಲ್ಲವೆಂದು ವರದಿಯಲ್ಲಿ ಪ್ರಸ್ತಾಪಿಸಿರುತ್ತಾರೆ.
3. 2015-16ನೇ ಸಾಲಿನ 14ನೇ ಹಣಕಾಸು ಯೋಜನೆಯ 2ನೇ ಕಂತಿನ ಹಣ ರೂ. 6,30,391.00 ಗಳಿಗೆ ಯಾವುದೇ ಕ್ರಿಯಾ ಯೋಜನೆ ತಯಾರಿಸಿರುವುದಿಲ್ಲ. ಸದರಿ ಅನುದಾನದ ಹಣ ಯಾವುದೇ ಕ್ರಿಯಾ ಯೋಜನೆ ತಯಾರಿಸದೇ ಖರ್ಚು ಮಾಡಿರುತ್ತಾರೆ.
4. 2016-17 ನೇ ಸಾಲಿನ 14 ನೇ ಹಣಕಾಸು ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ರೂ. 9,15,629.00 ಗಳಿಗೆ ಯಾವುದೇ ಕ್ರಿಯಾ ಯೋಜನೆ ತಯಾರಿಸಿರುವುದಿಲ್ಲ. ಆದರೆ ಸದರಿ ಅನುದಾನ ಖರ್ಚು ಮಾಡಿರುತ್ತಾರೆ.

5. ಮೇಲ್ಕಂಡ ಖರ್ಚು ಮಾಡಿದ ಹಣಕ್ಕೆ ಯಾವುದೇ ಪಾವತಿ ಇಟ್ಟಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.
6. ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರ ಹೆಸರಿನಲ್ಲಿ ದಿನಾಂಕ 27.07.2015 ರಂದು ರೂ. 30,720.00 ಗಳನ್ನು ದಿನಾಂಕ 14.10.2016 ರಂದು ರೂ. 30,000.00 ಗಳನ್ನು ಡ್ರಾ ಮಾಡಿಕೊಂಡಿರುತ್ತಾರೆ ಎಂದು ವರದಿ ಮಾಡಿರುತ್ತಾರೆ.
7. ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹೆಸರಿನಲ್ಲಿ ದಿನಾಂಕ 12.08.2016 ರಂದು ರೂ. 50,000.00 ಗಳನ್ನು ಡ್ರಾ ಮಾಡಿಕೊಂಡಿರುತ್ತಾರೆ ಎಂದು ವರದಿ ಮಾಡಿರುತ್ತಾರೆ.
8. 14ನೇ ಹಣಕಾಸು ಯೋಜನೆಯ ಅನುದಾನವು ಯಾವುದೇ ಸಿಬ್ಬಂದಿ ವೇತನಕ್ಕಾಗಿ ಪಾವತಿಸಲು ಅವಕಾಶ ಇಲ್ಲದಿದ್ದರೂ ರೂ. 2,48,136.00 ಗಳನ್ನು ಸಿಬ್ಬಂದಿ ವೇತನಕ್ಕಾಗಿ ಪಾವತಿ ಮಾಡಿರುತ್ತಾರೆ ಎಂದು ವರದಿ ಮಾಡಿರುತ್ತಾರೆ.
9. ಹರನಾಳ ಗ್ರಾಮ ಪಂಚಾಯತಿಯಲ್ಲಿ ಪದೇ ಪದೇ ಕೈ ಪಂಪು ರಿಪೇರಿ ಎಂದು 13ನೇ ಹಣಕಾಸು ಯೋಜನೆಯಡಿ ಅಂದರೆ 2015-16 ಮತ್ತು 2016-17ನೆ ಸಾಲಿನಲ್ಲಿ ಒಟ್ಟು ರೂ.1,23,440.00 ಮಾಡಿರುತ್ತಾರೆ.
10. ಮೇಲಿನ ಅವಧಿಯಲ್ಲಿ ಕೈಕೊಂಡ ಯಾವುದೇ ಕಾಮಗಾಇ ಕೆಲಸಕ್ಕೆ ಅಂದಾಜು ಪತ್ರಿಕೆ ಮತ್ತು ಇದಕ್ಕೆ ಸಂಬಂಧಿಸಿದ ಎಂ.ಬಿ. ಸಹ ಬರೆದಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

ಪ್ರಭಾರಿ ಪಿಡಿಓ ಶ್ರೀ ಬಜಂತ್ರಿ, ಗ್ರೇಡ್-2 ಕಾರ್ಯದರ್ಶಿ ಇವರಿಗೆ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆ ವಿಧಿಸಿ ಆದೇಶಿಸಿ, ಸೇವೆಯಿಂದ ಬಿಡುಗಡೆಗೊಳಿಸಲಾಗಿದ್ದು, ಮೇಲಿನಂತೆ 13ನೇ ಹಣಕಾಸು ಮತ್ತು 14ನೇ ಹಣಕಾಸು ಯೋಜನೆಯಲ್ಲಿ ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರ ಹೆಸರಿನಲ್ಲಿ ದಿನಾಂಕ 27.07.2015 ರಂದು ರೂ. 30,720.00 ಗಳನ್ನು ದಿನಾಂಕ 14.10.2016 ರಂದು ರೂ. 30,000.00 ಗಳನ್ನು ಡ್ರಾ ಮಾಡಿಕೊಂಡಿರುತ್ತಾರೆ ಹಾಗೂ 13ನೇ ಹಣಕಾಸು ಮತ್ತು 14ನೇ ಹಣಕಾಸು ಯೋಜನೆಯಲ್ಲಿ ಅವ್ಯವಹಾರವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ಮೇಲೆ ಕ್ರಮ ಕೈಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಗಳನ್ನು ಪರಿಶೀಲಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (4) ರಲ್ಲಿನ ಪತ್ರದಲ್ಲಿ ಸದರಿಯವರು ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ಹರನಾಳ ಗ್ರಾಮ ಪಂಚಾಯತಿಗೆ ನಿಯುಕ್ತಿಗೊಳಿಸಿದ ಶ್ರೀ ಎಂ.ಎಲ್.ಬಜಂತ್ರಿ ಇವರು ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿ ಇದ್ದು, ಇವರು ಪದೋನ್ನತಿ ಅಥವಾ ಅನುಭವಸ್ಥ ಪಂ.ಅ.ಅ. ಇರುವುದಿಲ್ಲ ಇವರು ಎಸಗಿದ ತಪ್ಪು ಕ್ರಮಗಳನ್ನು ತನ್ನ ಮೇಲೆ ಹೊರಿಸಿರುವುದಾಗಿ ತಿಳಿಸಿರುತ್ತಾರೆ.
ದಿನಾಂಕ 20.10.2016 ರಂದು ಮುಖ್ಯ ಯೋಜನಾಧಿಕಾರಿಗಳು ಗ್ರಾಮ ಪಂಚಾಯತಿಗೆ ಕಾರ್ಯದರ್ಶಿಯವರು ಗೈರುಹಾಜರಾಗಿದ್ದು ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ, ಮುಖ್ಯ ಯೋಜನಾಧಿಕಾರಿಗಳ ವಿಚಾರಣಾ ವರದಿ ನೈಜ ಸ್ವರೂಪ ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಮಗ್ರ ವರದಿಯನ್ನು ಪಡೆಯದೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.
ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ ಎಲ್ಲಾ ಕಾರ್ಯಗಳನ್ನು ಮಾಡಲಾಗಿದ್ದು, ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಎಲ್ಲಾ ದಾಖಲೆಗಳನ್ನು ಇಟ್ಟುಕೊಂಡಿದ್ದು, ಈ ಕಾರಣ ಕೇಳುವ ನೋಟೀಸನ್ನು ವಿಲೆ ಮಾಡಲು ಕೋರಿರುತ್ತಾರೆ."

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಿಖಿತ ಹೇಳಿಕೆಗಳು ಹಾಗೂ ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದೆ. ಸದರಿಯವರ ವಿರುದ್ಧ ಹರನಾಳ ಗ್ರಾಮ ಪಂಚಾಯತಿಯ 13 ಮತ್ತು 14 ನೇ ಹಣಕಾಸು ಆಯೋಗದ ಅನುದಾನವನ್ನು ಕ್ರಿಯಾಯೋಜನೆ ಅನುಸಾರ ಖರ್ಚು ಭರಿಸದೆ, ಹಣ ದುರುಪಯೋಗ ಮಾಡಿರುವುದು ಹಾಗೂ ಸ್ವಂತ ಹೆಸರಿನಲ್ಲಿ ಹಣವನ್ನು ಡ್ರಾ ಮಾಡಿಕೊಂಡಿರುವ ಆಪಾದನೆಗಳು ಸಾಬೀತಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 48(4) ಮತ್ತು 43(ಎ) ರನ್ವಯ ಕ್ರಮವಹಿಸಿ, ಸದರಿಯವರನ್ನು ಹರನಾಳ ಗ್ರಾಮ ಪಂಚಾಯತಿ ಅಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1171 ಗ್ರಾಪಂಅ 2016 ಬೆಂಗಳೂರು, ದಿನಾಂಕ: 31.03.2017**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಹರನಾಳ ಗ್ರಾಮ ಪಂಚಾಯತಿಯ 13 ಮತ್ತು 14 ನೇ ಹಣಕಾಸು ಆಯೋಗದ ಅನುದಾನವನ್ನು ಕ್ರಿಯಾಯೋಜನೆ ಅನುಸಾರ ಖರ್ಚು ಭರಿಸದೆ, ಹಣ ದುರುಪಯೋಗಪಡಿಸಿಕೊಂಡಿರುವುದು ಹಾಗೂ ಸ್ವಂತ ಹೆಸರಿನಲ್ಲಿ ಹಣವನ್ನು ಡ್ರಾ ಮಾಡಿಕೊಂಡಿರುವ ಆಪಾದನೆಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರನ್ನು ವಿಜಯಪುರ ಜಿಲ್ಲೆ ಸಿಂಧಗಿ ತಾಲ್ಲೂಕಿನ ಹರನಾಳ ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

*(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್),*
*ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ರವರಿಂದ ಅನುಮೋದಿತ)*

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಟಿ.ಪಿ.ಅರುಣ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ, ವಿಜಯಪುರ.
2) ಕಾರ್ಯನಿರ್ವಾಹಕ ಅಧಿಕಾರಿ, ಸಿಂಧಗಿ ತಾಲ್ಲೂಕು ಪಂಚಾಯತಿ, ಸಿಂಧಗಿ, ವಿಜಯಪುರ ಜಿಲ್ಲೆ. (ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಈ ಆದೇಶದ ಪ್ರತಿಯನ್ನು ತಲುಪಿಸಿ, ಸ್ವೀಕೃತಿ ಸಲ್ಲಿಸಲು ತಿಳಿಸಿದೆ.)
3) ಶ್ರೀ ಶಿವುನಗೌಡ ನಿಂಗನಗೌಡ ಬಿರಾದಾರ, ಅಧ್ಯಕ್ಷರು, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹರನಾಳ ಗ್ರಾಮ ಪಂಚಾಯತಿ, ಸಿಂಧಗಿ ತಾ., ವಿಜಯಪುರ ಜಿಲ್ಲೆ.
5) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.